**ದಿನಾಂಕಃ 19.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ: ಶ್ರೀ. ಬಿ.ಆರ್. ವಕೀಲರಿಂದಃ–**

ನಿಪಿ.21 ರಿಂದ 29 ರವರೆಗಿನ ದಾಖಲೆಗಳನ್ನು ಹಾಜರುಪಡಿಸುವಂತೆ ಪೊಲೀಸರು ನನಗೆ ನೋಟೀಸನ್ನು ನೀಡಿರಲಿಲ್ಲ. ದಿನಾಂಕ 13.10.2013 ರಲ್ಲಿ ನಾನು ಸದರಿ ದಾಖಲಾತಿಗಳನ್ನು ಪೊಲೀಸರಿಗೆ ತೆಗೆದುಕೊಂಡು ಹೋಗಿ ನೀಡಿರುತ್ತೇನೆ. ಪೊಲೀಸರು ದಾಖಲಾತಿಗಳನ್ನು ತೆಗೆದುಕೊಂಡು ನಿಮ್ಮ ಊರಿನವರು ಇಬ್ಬರು ಯಾರನ್ನಾದರು ಕರೆದುಕೊಂಡು ಬನ್ನಿ ಎಂದು ನನಗೆ ತಿಳಿಸಿದ್ದರು. ಪೊಲೀಸರು ನಿಮ್ಮ ತಂದೆಯ ಸಹಿ ಇರುವ ಹಳೆ ದಾಖಲಾತಿಗಳನ್ನು ತೆಗೆದುಕೊಂಡು ಬರುವಂತೆ ತಿಳಿಸಿದ್ದರು. ಪೊಲೀಸರು ನನಗೆ ನಿಖರವಾಗಿ ಇಂತಹ ದಾಖಲಾತಿಗಳನ್ನೇ ತರಬೇಕು ಎಂದು ತಿಳಿಸಿರಲಿಲ್ಲ.

ನಿಪಿ.21 ರಿಂದ 29 ರ ದಾಖಲಾತಿಗಳ ಮೂಲ ಪ್ರತಿಗಳು ಯಾರ ಬಳಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.23 ರಿಂದ 30 ರ ದಾಖಲಾತಿಗಳನ್ನು ಸಾಕ್ಷಿ ನೋಡಿ ಸದರಿ ದಾಖಲಾತಿಗಳಲ್ಲಿ ನನ್ನ ತಂದೆಯ ಸಹಿಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಪೊಲೀಸರಿಗೆ ನಾನು ಜಮೀನಿನ ವಿನಿಮಯ ಪತ್ರವನ್ನು ಮಾತ್ರ ನೀಡಿರುತ್ತೇನೆ. ವಿನಿಮಯ ಪತ್ರದಲ್ಲಿ ನಾನು ಪಕ್ಷಗಾರನಾಗಿರುವುದಿಲ್ಲ ಎಂದರೆ ಸರಿ. ವಿನಿಮಯ ಪತ್ರ ಮಾಡುವಾಗ ನಾನು ಸಹಿ ಮಾಡಿರುವುದಿಲ್ಲ. ವಿನಿಮಯ ಪತ್ರದಲ್ಲಿ ನನ್ನ ತಂದೆಯ ಸಹಿಯನ್ನು ನಾನು ಗುರುತಿಸಿರುವುದಿಲ್ಲ. ಸದರಿ ವಿನಿಮಯ ಪತ್ರಕ್ಕೆ ನಾನು ಸಾಕ್ಷಿಯಾಗಿಯೂ ಸಹಿ ಮಾಡಿರುವುದಿಲ್ಲ.

ಪೊಲೀಸ್ ಠಾಣೆಗೆ ನಿಪಿ.21 ರಿಂದ 30 ರ ದಾಖಲಾತಿಗಳನ್ನು ತೆಗೆದುಕೊಂಡು ನಾನು, ಚಾಸಾ–5 ಮತ್ತು 12 ರವರು ಹೋಗಿರುತ್ತೇವೆ. ಚಾಸಾ–5 ಮತ್ತು 12 ರವರು ನಮ್ಮ ಊರಿನವರೇ ಆಗಿರುತ್ತಾರೆ. ನಾವು ಠಾಣೆಯಲ್ಲಿ ಬೆಳಗ್ಗೆ 10.00 ಗಂಟೆಯಿಂದ 11.00 ಗಂಟೆ ತನಕ ಇದ್ದೆವು. ನಿಪಿ.21 ರಿಂದ 30 ರ ದಾಖಲಾತಿಗಳನ್ನು ನಾನು ಮತ್ತು ನನ್ನ ತಮ್ಮನಾದ ಚಾಸಾ–2 ರವರು ಪೊಲೀಸರೊಂದಿಗೆ ಬೆಂಗಳೂರಿಗೆ ಹೋಗಿ ತೆಗೆಸಿಕೊಂಡು ಬಂದಿರುತ್ತೇವೆ. ನಿಪಿ.21 ರಿಂದ 30 ರ ದಾಖಲಾತಿಗಳನ್ನು ಬೆಂಗಳೂರಿನ ಹೌಸಿಂಗ್ ಬೋರ್ಡಿನಲ್ಲಿ ತಂದಿರುತ್ತೇವೆ. ನಿಪಿ.21 ರಿಂದ 30 ರ ದಾಖಲಾತಿಗಳನ್ನು ತೆಗೆಸಿಕೊಂಡು

ಬರಲು ಪೊಲೀಸರಿಗೇ ನಮ್ಮನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ಈ ಹಿಂದೆ ನಾವು ಬೆಂಗಳೂರಿನ ಹೌಸಿಂಗ್ ಬೋರ್ಡ್ ಅನ್ನು ಹೋಗಿ ನೋಡಿರುವುದಿಲ್ಲ. ನಿಪಿ.21 ರಿಂದ 30ರ ದಾಖಲಾತಿಗಳಲ್ಲಿರುವ ಆಸ್ತಿಗಳು ಬೆಂಗಳೂರಿನ ಹೌಸಿಂಗ್ ಬೋರ್ಡಿಗೆ ಆಧಾರವಾಗಿದ್ದವು ಎಂದರೆ ಸರಿ. ನಾವು ನಿಪಿ.21 ರಿಂದ 30ರ ದಾಖಲಾತಿಗಳನ್ನು ತರುವ ಸಂದರ್ಭಗಳಲ್ಲಿ ಸದರಿ ಆಸ್ತಿಗಳ ಮೇಲೆ ಪಡೆದ ಸಾಲ ಇನ್ನೂ ತೀರುವಳಿಯಾಗಿರಲಿಲ್ಲ ಎಂದರೆ ಸರಿ. ನಿಪಿ.21 ರಿಂದ 30ರ ದಾಖಲಾತಿಗಳನ್ನು ನೀಡುವಂತೆ ಕೋರಿ ಪೊಲೀಸರೇ ಅರ್ಜಿಯನ್ನು ನೀಡಿರುತ್ತಾರೆ. ಬೆಂಗಳೂರಿನ ಹೌಸಿಂಗ್ ಬೋರ್ಡಿನವರು ಸದರಿ ಆಸ್ತಿಗಳ ಮೇಲೆ ಸಾಲ ತೀರುವಳಿಯಾಗಿರುವುದಿಲ್ಲ ಎಂದು ನಮಗೆ ತಿಳಿಸಿರುವುದಿಲ್ಲ. ಪೊಲೀಸರು ನಿಪಿ.21 ರಿಂದ 30ರ ದಾಖಲಾತಿಗಳನ್ನು ಪಡೆಯಲು ಬೆಂಗಳೂರಿನ ಹೌಸಿಂಗ್ ಬೋರ್ಡ್ ರವರಿಗೆ ಪೊಲೀಸರೇ ಅರ್ಜಿಯನ್ನು ಸಲ್ಲಿಸಿ ನನ್ನ ಸಹಿಯನ್ನು ಪಡೆದು ಪೊಲೀಸರ ಸುಪರ್ದಿಗೆ ಸದರಿ ದಾಖಲಾತಿಗಳನ್ನು ಬೆಂಗಳೂರಿನಲ್ಲಿಯೇ ಪಡೆದುಕೊಂಡಿರುತ್ತಾರೆ.

ಬೆಂಗಳೂರಿನ ಹೌಸಿಂಗ್ ಬೋರ್ಡ್ ಕಛೇರಿಯಲ್ಲಿ ಯಾವುದಾದರು ದಾಖಲಾತಿಗಳಿಗೆ ನನ್ನ ಸಹಿ ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ಈಗ ಮರೆತು ಹೋಗಿರುತ್ತದೆ. ಅದೇ ರೀತಿ ಪೊಲೀಸರು ಸಹ ನನ್ನ ಸಹಿ ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ಈಗ ಮರೆತು ಹೋಗಿರುತ್ತದೆ. ನಾನು ಬೆಂಗಳೂರಿಗೆ ಹೋದಾಗ ಈಶಪ್ಪ ಮತ್ತು ಮಂಜಪ್ಪ ಎನ್ನುವವರು ಸಹ ನಮ್ಮೊಂದಿಗೆ ಬಂದಿದ್ದರು. ಪೊಲೀಸರು ಸದರಿ ಈಶಪ್ಪ ಮತ್ತು ಮಂಜಪ್ಪನವರ ಸಹಿಯನ್ನು ಬೆಂಗಳೂರಿನಲ್ಲಿ ಪಡೆದುಕೊಂಡಿರುತ್ತಾರೆ, ಆದರೆ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಈಶಪ್ಪ ಮತ್ತು ಮಂಜಪ್ಪನವರ ಸಹಿಗಳನ್ನು ಬೆಂಗಳೂರಿನಲ್ಲಿ ಪಡೆಯುವಾಗ ಖಾಲಿ ಕಾಗದ ಪತ್ರಕ್ಕೆ ಸಹಿ ಪಡೆದಿರುತ್ತಾರೋ ಅಥವಾ ಭರ್ತಿ ಮಾಡಿದ ಕಾಗದ ಪತ್ರಕ್ಕೆ ಸಹಿ ಪಡೆದಿರುತ್ತಾರೋ ಎಂದು ನನಗೆ ಗೊತ್ತಿಲ್ಲ.

ಪೊಲೀಸ್ ಠಾಣೆಯಲ್ಲಿ ಚಾಸಾ-5 ಮತ್ತು 12ರವರ ಸಹಿಯನ್ನು ಪಡೆದಿರುತ್ತಾರೆ, ನನ್ನ ಸಹಿಯನ್ನು ಪಡೆದಿರುವುದಿಲ್ಲ. ಚಾಸಾ-5 ಮತ್ತು 12ರವರು ಸಹಿ ಮಾಡುವಾಗ ಕಾಗದ ಪತ್ರಗಳನ್ನು ಭರ್ತಿ ಮಾಡಲಾಗಿತ್ತು. ಸದರಿ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಚಾಸಾ-5 ಮತ್ತು 12ರವರು ಸಹಿ ಮಾಡಿದ ಕಾಗದ ಪತ್ರಗಳನ್ನು ನಾವು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ.21ರ ಕಾಗದ ಪತ್ರವು ನೋಟರಿಯ ದೃಢೀಕೃತ ನಕಲಾಗಿರುತ್ತದೆ ಎಂದರೆ ಸರಿ. ದಾಖಲಾತಿಗಳನ್ನು ನೋಟರಿ ಮಾಡುವಾಗ ದಾಖಲಾತಿಗಳಿಗೆ ನೋಟರಿ ಮಾಡುವುದರ

ಜೊತೆಗೆ ನೋಟರಿ ನೊಂದಣಿ ರಿಜಿಸ್ಟರಿಗೂ ನಮ್ಮ ಸಹಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಪೊಲೀಸರು ಸದರಿ ನೊಂದಣಿ ರಿಜಿಸ್ಟರನ್ನು ತಂದು ಹಾಜರುಪಡಿಸುವಂತೆ ತಿಳಿಸಿರುವುದಿಲ್ಲ. ನಿಪಿ.21 ರಿಂದ 30ರ ದಾಖಲಾತಿಗಳನ್ನು ಪೊಲೀಸರು ಪಡೆಯುವ ಮೊದಲು ಹಾಗೂ ಇಲ್ಲಿಯವರೆಗು ಅದನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ.

ನಿಪಿ.21 ರಿಂದ 30ರ ದಾಖಲಾತಿಗಳು ನನ್ನ ತಂದೆ ಮೃತ ಮಲ್ಲಪ್ಪನವರಿಗೆ ಸಂಬಂಧಿಸಿದ ದಾಖಲಾತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನೀಡಿರುವುದಿಲ್ಲ. ನಾನು ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನೀಡಿದ ಬಗ್ಗೆ ಪೊಲೀಸರು ಯಾವುದೇ ಮಹಜರು ಕ್ರಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 12ರವರು ನನ್ನ ಸಂಬಂಧಿಕರಾಗಿದ್ದು ನಾನು ಮತ್ತು ಚಾಸಾ-5 ಮತ್ತು 12ರವರು ಪೊಲೀಸರೊಂದಿಗೆ ಶರೀಕ್ ಆಗಿ ಯಾವುದೇ ಮಹಜರು ಕ್ರಮ ಜರುಗಿಸದೆ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

C/c. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.